# ನಾವು ಸುಳ್ಳನ್ನು ಪ್ರೀತಿಸುತ್ತೇವೆಯೇ?

ಇದು ನಿಜ. ನಾವು ಸುಳ್ಳನ್ನು ಪ್ರೀತಿಸುತ್ತೇವೆ. ಏಕೆಂದರೆ ಅದು ಪ್ರಿಯವಾಗಿ ಮಾತನಾಡುತ್ತದೆ. ತನ್ನ ತಳಕು ಬಳಕು ಒನಪು ವಯ್ಯಾರಗಳಿಂದ ನಮ್ಮನ್ನು ಮರಳು ಮಾಡಿ ಒಪ್ಪಿಸುತ್ತದೆ. ಆದರೆ ಸತ್ಯ ಹಾಗಲ್ಲ. ಅದರ ಸ್ವರೂಪ ಒರಟು, ಜೀರ್ಣಿಸಿಕೊಳ್ಳಲು ಅಸಾಧ್ಯವಾದ ಸವಾಲು. ಆದ್ದರಿಂದಲೇ ಅದನ್ನು ಕಹಿ ಎಂದು ಕರೆಯುವುದು. ಆದರೆ ಕಹಿಯಾದದ್ದು ಯಾವಾಗಲೂ ಒಳಿತಿನ ಮುಖದ ಕಡೆ ನಮ್ಮನ್ನು ತಿರುಗುವಂತೆ ಪ್ರೇರೇಪಿಸುತ್ತಿರುತ್ತದೆ. ನಮ್ಮ ದೇಹದ ಮೇಲೆ ಆಕ್ರಮಣ ಮಾಡುವ ತೀವ್ರತರ ರೋಗಗಳ ಬಗ್ಗೆ ನಾವು ಹೆದರುತ್ತೇವೆ. ವೈದ್ಯರು ಶುಭವನ್ನೇ (ಅಥವಾ ಸುಳ್ಳನ್ನೇ) ನುಡಿಯಲೆಂದು ನಮ್ಮ ಮನ ಬಯಸುತ್ತಿರುತ್ತದೆ. ಸತ್ಯದ ಮುಖಾ ಮುಖಿಯಾಗಿ ಅದನ್ನು ಹೆದರಿಸುವ ಧೈರ್ಯ ಬಹುಮಂದಿಗೆ ಇರುವುದಿಲ್ಲ. ಆದ್ದರಿಂದ ನಮಗೆ ಮಿಥ್ಯೆ ಪ್ರಿಯವಾಗುತ್ತದೆ. ಮಿಥ್ಯಾ ಪ್ರಪಂಚದಲ್ಲಿ ವಿಹರಿಸುವುದು ನಮಗೆ ತತ್ಕಾಲದ ಆನಂದವನ್ನು ತರುತ್ತದೆ. ಈ ಅಲ್ಪ ಆನಂದದಲ್ಲಿ ಮೈ ಮರೆತು ಅಲೆಯುವುದು ನಮಗೆ ಇಷ್ಟವಾಗುತ್ತದೆ.

ಕಲೆ ಸತ್ಯವನ್ನು ಅದರ ವಾಸ್ತವಿಕ ನೆಲೆಯಿಂದ ಭಿನ್ನವಾಗಿ ಬಣ್ಣ ಕಟ್ಟಿ ವೈಭವೀಕರಿಸಿ ಅಭಿವ್ಯಕ್ತಿಸುತ್ತದೆ ಎಂಬ ಹಳೆಯ ಮಾತಿದೆ. ಅದನ್ನೇ ಪ್ಲೇಟೋ ಪ್ರತಿಪಾದಿಸಿದ್ದು. ಸುಳ್ಳುಗಳ ಮಾಲೆಯನ್ನೇ ಅಲಂಕಾರಯುತವಾಗಿ ಬಗೆ ಬಗೆಯ ಲೇಪನಗಳಿಂದ ಹೆಣೆದು ಜನರನ್ನು ವಂಚಿಸುವುದರಿಂದ ಅವರನ್ನು ಸತ್ಯವನ್ನು ಎದುರಿಸುವಲ್ಲಿ ಅಧೀರಗೊಳಿಸುತ್ತದೆಯೆಂಬ ಮಾತು ಹುಸಿಯಲ್ಲ! ಇದ್ದುದನ್ನು ಇದ್ದ ಹಾಗೆ ಹೇಳುತ್ತದೆಯೆಂಬ ಛಾಯಾಗ್ರಹಣವು ಕೂಡ ಸತ್ಯದಿಂದ ಮಾರು ದೂರ ನಿಂತು ವೈಭವೀಕರಿಸುತ್ತದೆಯೆಂಬುದು ಸತ್ಯ! ಕಟು ವಾಸ್ತವವಾದಿ ನೆಲೆಯಲ್ಲಿ ಕಥೆ ಕಾದಂಬರಿ ನೇಯುತ್ತಿದ್ದೇವೆಂದು ಹೇಳುವ ನಮ್ಮ ಅನೇಕ ಲೇಖಕರು ಬವಣೆ ಬೇನೆಗಳನ್ನು ಅತಿಯಾಗಿ ಅಭಿವ್ಯಕ್ತಿಸಿರುವುದು ನಮಗೆ ತಿಳಿಯದ ವಿಷಯವಲ್ಲ. ಅಂದರೆ ಕೇವಲ ಆನಂದ ಅಥವಾ ಖುಷಿ ತರುವ ಅಂಶಗಳನ್ನು ಮಾತ್ರವಲ್ಲ, ಅತ್ಯಂತ ನೋವು ತರುವ ಬಡತನ, ಅವಮಾನ, ಅಸಮಾನತೆ ಮುಂತಾದ ಅಮಾನವೀಯ ಅಂಶಗಳನ್ನು ಸತ್ಯದಿಂದ ನಾಲ್ಕು ಮಾರು ದೂರ ಎಳೆದು ಚಿತ್ರಿಸಿ ಓದುಗರನ್ನು ಕ್ರೌರ್ಯದ ವಿವಿಧ ಮುಖಗಳತ್ತ ಸೆಳೆದು ಅಗತ್ಯಕ್ಕಿಂತ ಹೆಚ್ಚು ಮಗ್ನಗೊಳ್ಳುವಂತೆ ಮಾಡುವ ತಂತ್ರಗಾರಿಕೆಯಿದೆ. ಇಲ್ಲಿಯೂ ಎಲ್ಲೋ ಲೇಖಕ ಮತ್ತು ಓದುಗ ಸತ್ಯದಾಚೆಯ ಮುಖವನ್ನೇ ಬಯಸುತ್ತಾರೆಂದಾಯಿತು.

ಎಂದಿಗಿಂತ ಇಂದು ನಮ್ಮ ಸಾಮಾಜಿಕರು ಸುಳ್ಳನ್ನು ಪ್ರೀತಿಸುತ್ತಾರೆಂಬುದನ್ನು ನಮ್ಮ ಆಧುನಿಕ ಮಾರುಕಟ್ಟೆ ಪ್ರಪಂಚ ಸಾಬೀತುಪಡಿಸಿದೆ. ಅದಕ್ಕೆ ತನ್ನ ಸರಕುಗಳನ್ನು ವಿವಿಧ ಬಗೆಯ ರೂಪಗಳಲ್ಲಿ– ಧ್ವನಿ ರೂಪ ಸಾಧ್ಯತೆಗಳಲ್ಲಿ– ಅಭಿವ್ಯಕ್ತಿಸಲು ಜ್ಞಾನ–ವಿಜ್ಞಾನ–ತಂತ್ರಜ್ಞಾನ ಮಾಧ್ಯಮಗಳು ಇಂದು ಲಭಿಸಿವೆ. ಅದರಲ್ಲೂ ವಿದ್ಯುನ್ಮಾನ ಮಾಧ್ಯಮವಂತೂ ಮಾರುಕಟ್ಟೆ ಸಂಸ್ಕೃತಿ ತನ್ನ ರೆಕ್ಕೆ ಪುಕ್ಕಗಳನ್ನು ಕೃತಕವಾಗಿ ಕಟ್ಟಿಕೊಂಡು ಕುಣಿಯಲು ಒಳ್ಳೆಯ ರಹದಾರಿ ಕಲ್ಪಿಸಿದೆ. ಕಪ್ಪು ಬಿಳಿಪು ಯುಗದಿಂದ ಚಿಮ್ಮಿ ಬಣ್ಣದ ದುನಿಯಾದಲ್ಲಿ ಅದು ಮಿಂದು ಹಾರಾಡಲು ಒಳ್ಳೆಯ ಅವಕಾಶ ಸಿಕ್ಕಿದೆ. ಮೊದಲೇ ಭಾರತೀಯ ಸಾಮಾಜಿಕರು– ಅದರಲ್ಲೂ ಮಧ್ಯಮ ವರ್ಗದವರು– ಕೊಳ್ಳುಬಾಕರು. ಅವರಿಗೆ ಬಾಳಿಕೆಗಿಂತ, ಅಗತ್ಯತೆಗಿಂತ ಅಲಂಕಾರ ಮುಖ್ಯ, ಸತ್ವಕ್ಕಿಂತ ನೋಟ ಮುಖ್ಯ. ಈ ದೌರ್ಬಲ್ಯವನ್ನು ಅರಿತಿರುವ ಮಾರುಕಟ್ಟೆಯ ಮಂದಿ ತಮ್ಮ ಸರಕುಗಳ ಗುಣಮಟ್ಟವನ್ನು ವೈಭವೀಕರಿಸಿ ಜಾಹಿರಾತು ನೀಡುತ್ತಾರೆ. ಆ ಜಾಹಿರಾತಿನ ಥಳುಕಿಗೆ ಮರುಳಾಗುವ ಸಾಮಾಜಿಕರು ಆ ಸರಕುಗಳನ್ನು ಕೊಂಡು ಅನಂತರ ಪೇಚಾಡುತ್ತಾರೆ.

ಕುಟುಂಬ ಜೀವನದಲ್ಲೂ ಅಷ್ಟೇ. ನಾವು ನಮಗೆ ಹತ್ತಿರದವರ ಬಗ್ಗೆ ಅಥವಾ ನಾವು ಹೆಚ್ಚು ಪ್ರೀತಿಸುವವರ ಬಗ್ಗೆ ಅತಿಯಾದ ಹುಸಿ ಭರವಸೆಗಳನ್ನು ಇಟ್ಟುಕೊಂಡಿರುತ್ತೇವೆ. ಅವರ ಜೀವನದ ಅತ್ಯಂತ ನಿಗೂಢತೆಯ ವಾಸ್ತವವನ್ನು ಅರಿಯಲು ನಾವು ಹಿಂದು ಮುಂದು ನೋಡುತ್ತೇವೆ. ನಮ್ಮ ತಂದೆ–ತಾಯಿ, ಮಕ್ಕಳು ಮತ್ತು ರಕ್ತ ಸಂಬಂಧಿಗಳ ಕತ್ತಲ ಬದುಕನ್ನು ನಾವು ಅರಿತು ಜೀರ್ಣಿಸಿಕೊಳ್ಳಲು ನಿರಾಕರಿಸುತ್ತೇವೆ. ತಾಯಿಗಂತು ಮಕ್ಕಳ ತಪ್ಪುಗಳು ತಪ್ಪುಗಳಾಗೇ ಕಾಣುವುದಿಲ್ಲ. ಅಥವಾ ಕಂಡರೂ ಆ ತಪ್ಪು ಮಾಡಲು ಅವನು ಕಾರಣನಲ್ಲ, ಇನ್ಯಾರೋ ಕಾರಣರು ಎಂದು ಸತ್ಯವನ್ನು ಧರಿಸಲು ನಿರಾಕರಿಸಿಬಿಡುತ್ತಾಳೆ. ಅನೇಕ ತಂದೆ–ತಾಯಿಗಳು ತಮ್ಮ ಮಕ್ಕಳಲ್ಲಿ ಇಲ್ಲದ ಗುಣಗಳನ್ನು ಇದೆ ಎಂದು ಬಣ್ಣಿಸಿ ಇತರರ ಮುಂದೆ ವೈಭವೀಕರಿಸಿ ಮಾತನಾಡುತ್ತಾರೆ. ತನ್ಮೂಲಕ ತಮ್ಮ ಮಕ್ಕಳ ಮನಸ್ಸಿನಲ್ಲಿ ಪೊಳ್ಳು ವ್ಯಕ್ತಿತ್ವ ಬೆಳೆಯಲು ಕಾರಣರಾಗುತ್ತಾರೆ.

ನಮ್ಮ ಸಾರ್ವಜನಿಕ ಜೀವನದಲ್ಲಿ ಅಥವಾ ವೃತ್ತಿ ಜೀವನದಲ್ಲೇ ಅನೇಕ ಬಾರಿ ಮಿಥ್ಯೆಯ ಬೆನ್ನು ಹತ್ತಿ ಸಾಗಲು ಬಯಸುತ್ತೇವೆ. ನಮ್ಮ ಆಲೋಚನಾ ವಿಧಾನ, ನಂಬಿದ ತತ್ವ–ಸಿದ್ಧಾಂತಗಳ ಅನುಯಾಯಿಗಳು ನಮಗೆ ಪ್ರಿಯರಾಗುತ್ತಾರೆ. ಅವರು ತಪ್ಪು ಹೆಜ್ಜೆ ಇಡುತ್ತಿರುವಾಗಲೂ ನಾವು ಅವರನ್ನು ಸಮರ್ಥಿಸಿಕೊಂಡು ಅಸತ್ಯದ ಪರ ವಾಲುತ್ತೇವೆ. ಆದರೆ ಸತ್ಯ ಎಷ್ಟೇ ಕಹಿಯಾದರೂ ಅದನ್ನು ಸ್ವೀಕರಿಸಲು ನಾವು ಸಿದ್ಧರಾಗಬೇಕು. ಅದು ನಮ್ಮನ್ನು ಬದುಕಿನ ಕಠೋರತೆಯ ವಿರುದ್ಧ ಗಟ್ಟಿಗೊಳ್ಳಲು ಅಣಿಗೊಳಿಸುತ್ತದೆ.

**■ ಶಿಕಾಕು**

## ಮಾತೇ ಮುತ್ತು

★ ತೊಂದರೆ ಮಾಡದ ಕೆಟ್ಟದ್ದು, ಲಾಭ ಮಾಡದ ಒಳ್ಳೆಯದಕ್ಕಿಂತ ಕೆಟ್ಟದ್ದೇನಲ್ಲ.

–ಜರ್ಮನಿ ಗಾದೆ

★ ಕಾನೂನು ಇಲ್ಲದಿರುವುದು, ಕ್ರೂರವಾದ ಕಾನೂನು ಇರುವುದಕ್ಕಿಂತ ಒಳ್ಳೆಯದು.

–ಈಸೋಪ್

★ ಯಾರು ಸ್ವಾರ್ಥವನ್ನು ಬಿಟ್ಟು ಪರರ ಹಿತ ಸಾಧಿಸುತ್ತಾರೋ ಅವರು ಸತ್ಪುರುಷರು. ಯಾರು ಸ್ವಾರ್ಥಕ್ಕೆ ತೊಂದರೆ ಬರದಂತೆ ಪರಾರ್ಥವನ್ನು ಸಾಧಿಸುತ್ತಾರೋ ಅವರು ಸಾಮಾನ್ಯರು. ಯಾರು ಸ್ವಾರ್ಥಕ್ಕೋಸ್ಕರ ಪರರ ಹಿತವನ್ನು ಹಾಳು ಮಾಡುತ್ತಾರೋ ಅವರು ಮಾನುಷ ರಾಕ್ಷಸರು.

–ನೀತಿಶತಕ

★ ದುಷ್ಟನು ಕೆಟ್ಟ ದಾರಿಯಲ್ಲಿ ನಡೆಯುತ್ತಾನೆ. ಅದರ ಪರಿಣಾಮ ಸಜ್ಜನರ ಮೇಲೆ ಆಗುತ್ತದೆ. ಸೀತೆಯನ್ನು ರಾವಣ ಅಪಹರಿಸಿದರೆ ಮಹಾ ಸಾಗರಕ್ಕೆ ಬಂಧನವಾಯಿತು.

–ಹಿತೋಪದೇಶ

★ ಗುಣವಂತರ ಗುಣಗಳನ್ನು ಇನ್ನೂ ಅಧಿಕ ಗುಣಶಾಲಿಗಳ ನಡೆ ಮರೆಸುತ್ತದೆ. ದೀಪದ ಕುಡಿಯ ಬೆಳಕು ರಾತ್ರಿ ಕಾಣಿಸುವುದೇ ವಿನಾಃ, ಸೂರ್ಯ ಹುಟ್ಟಿದಾಗ ಕಾಣಿಸುವುದಿಲ್ಲ.

–ಪಂಚತಂತ್ರ

★ ಕಾಲ ಎಂಬ ಮುದಿ ದಾದಿ ನನಗೆ ತಾಳ್ಮೆ ಕಲಿಸಿದಳು.

–ಜಾನ್ ಕೀಟ್ಸ್

★ ಪ್ರತಿ ದಿನವನ್ನೂ ನಮ್ಮ ಕೊನೆಯ ದಿನವೆಂಬಂತೆ ಕಳೆಯಬೇಕು.

–ಪಿ.ಸೈರಸ್

★ ಮನುಷ್ಯರು ಸತ್ತಮೇಲೂ ಅವರು ಮಾಡಿದ ಕೆಟ್ಟದ್ದೇ ನಿಲ್ಲುತ್ತದೆ; ಒಳ್ಳೆಯದು ಮಾತ್ರ ಮರೆತು ಹೋಗುತ್ತದೆ.

–ಶೇಕ್ಸ್‌ಪಿಯರ್

★ ಕಾಲೇಜು ತಿಳಿವನ್ನು ಕೊಡುವುದಿಲ್ಲ; ಅದೆಲ್ಲಿದೆ ಎಂಬುದನ್ನು ತೋರಿಸುತ್ತದೆ, ಅಷ್ಟೆ.

–ಇ.ಸಿ.ಮೆಕೆಂಜೀ

★ ಅಂದಿಗೆ ಅದೇ ಸುಖ; ಇಂದಿಗೆ ಇದೇ ಸುಖ.

–ಗಾದೆ

★ ನಿಜವಾದ ಕಾವ್ಯ ಅರ್ಥವಾಗುವುದಕ್ಕೂ ಮೊದಲೇ ನಮ್ಮೊಡನೆ ಮಾತನಾಡುತ್ತದೆ.

–ಟಿ.ಎಸ್.ಎಲಿಯಟ್

★ ಕಾವ್ಯವೆಂದರೆ ಮನುಷ್ಯನ ಅಂತರಂಗ ಜೀವನದ ವಾಕ್ಯರೂಪದ ಪ್ರತಿಕೃತಿ.

–ಡಿ.ವಿ.ಜಿ.

★ ಯಶಸ್ಸು ದೊರೆತಾಗ ಸಂತೋಷ ಪಡುವುದೂ, ಅದಾದದ್ದು ನನ್ನಿಂದಲೇ ಎನ್ನುವುದೂ ಎರಡೂ ಒಂದೇ ಅಲ್ಲ. ಸಂತೋಷ ಪಡದಿದ್ದರೆ ಜೀವನದಿಂದ ವಂಚಿತರಾಗುತ್ತೇವೆ. ಆದದ್ದು ನನ್ನಿಂದಲೇ ಎಂದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.

–ದಾಗ್ ಹ್ಯಾಮರ್ ಸ್ಕೋಲ್ಡ್